ಮಾತಾಡ್ಬೇಕು' ಎಂದಳು.

ಕೃಷ್ಣಪ್ಪಗೆ ತಾವು ಅಯ್ನೋರ ಹತ್ತಿರ ವ್ಯವಹಾರ ಮಾಡುವುದು ಸರಿಯಲ್ಲವೆಂದು ಅನ್ನಿಸಿತು. ಪಶುವೈದ್ಯರ ಹತ್ತಿರ ಹೇಳಿ ಅಯ್ನೋರನ್ನು ಒಪ್ಪಿಸಬಹುದೆಂದುಕೊಂಡರು. ಊರಿಗೊಬ್ಬರೇ ವೈದ್ಯರಾದ್ದರಿಂದ ಎಲ್ಲಾ ಹಸುಗಳ ವಿಷಯವೂ ಗೊತ್ತಿತ್ತು. ಕೃಷ್ಣಪ್ಪ, ಡಾಕ್ಟರ ಜೊತೆ ಅನ್ಯೋನ್ಯವಾಗಿದ್ದರು. ಅವರಿಗೆ ಸಾವಿತ್ರಿಯ ಕಷ್ಟ ತಿಳಿದಿತ್ತು. ಹಸು ಸತ್ತಾಗ ಬಿಕ್ಕಿಬಿಕ್ಕಿ ಅತ್ತಿದ್ದನ್ನು ನೋಡಿದ್ದರು. ಪಶುವೈದ್ಯರು, 'ಮಾರುವುದೇನೋ ಖರೆ. ಆದರೆ ಜಗ್ಗೀ ದುಡ್ಡು ಕೇಳ್ತಾರೆ. ನೀವೂ ಬರ್ರಿ. ಮಾತಾಡೋಣಂತೆ' ಎಂದರು. ಕೃಷ್ಣಪ್ಪಗೆ ಇರುಸು ಮುರುಸಾಯಿತು. ತಾನು ಭಾಗಿಯಾಗುವುದು ಎಷ್ಟರಮಟ್ಟಿಗೆ ಸರಿ ಎನ್ನುವ ಪ್ರಶ್ನೆ ಮೂಡಿತು. ತಾನಿಲ್ಲದೆ ಡಾಕ್ಟರ್ ಮಾತನಾಡಲು ಒಪ್ಪಲಾರರೆಂದು ಸಮ್ಮತಿಸಿದರು.

ಡಾಕ್ಟರ್, ಬ್ಯಾಂಕ್ ಮ್ಯಾನೇಜರ್ ಯಾರಿಗೋ ಹಸು ಕೊಡಿಸಲು ಒಟ್ಟಿಗೆ ಬಂದಿದ್ದು ಅಯ್ನೋರಿಗೆ ಆಶ್ಚರ್ಯ ತಂದಿತ್ತು. ಮ್ಯಾನೇಜರ್ ಅವರಿಗೆ ಎಲ್ಲಾ ವಿಷಯಗಳನ್ನು ವಿವರಿಸಿ ಹೇಳಿದರು. ಆಕೆ ತುಂಬಾ ನೊಂದಿದ್ದಾಳೆ, ಸಾಲದ ಎರಡನೇ ಕಂತು ಬಿಡುಗಡೆ ಮಾಡುವ ಅವಕಾಶವಿದೆ. ಅವಳಿಗೆ, ಅವಳ ಮಗಳ ಬದುಕಿಗೆ ಸಹಾಯ ಮಾಡಿದಂತಾಗುತ್ತದೆ ಎಂದು ಮನದಟ್ಟು ಮಾಡಲು ಯತ್ನಿಸಿದರು. ಆಕೆ ಸ್ವತಃ ಬರಲು ಹಿಂಜರಿಯುತ್ತಿರುವುದನ್ನೂ ತಿಳಿಸಿದರು. ಅವರ ಮಾತುಗಳನ್ನು ಅಯ್ನೋರು ಕೇಳಿಸಿಕೊಳ್ಳುತ್ತಿದ್ದರು.

'ನೀವು ದೊಡ್ನೋರು, ಒಂಚೂರು ರೇಟ್ ಕಮ್ಮಿ ಮಾಡ್ರಲಾ' ಡಾಕ್ಟರ್ ಪುಸಲಾಯಿಸಿದರು. ಅಯ್ನೋರು ತೀರಾ ಕಡಿಮೆ ಮಾಡಲು ತಯಾರಿರಲಿಲ್ಲ. ಕರೆಯುವ ಹಸುವನ್ನು, ಕರುವಿನ ಸಮೇತ ಕಮ್ಮಿ ದುಡ್ಡಿಗೆ ಯಾರೂ ಕೊಡುವುದಿಲ್ಲ. ಡಾಕ್ಟರ್ ಮತ್ತು ಮ್ಯಾನೇಜರ್ ಒತ್ತಾಯ ಮಾಡಿದ್ದಕ್ಕೆ ಕೊನೆಯ ಮಾತು ಹೇಳಿ ಬಿಟ್ಟರು. 'ಅರವತ್ತು ಸಾವಿರ ಕಡೇ ರೇಟು. ನೀವಿಬ್ರೂ ಬಂದಿದ್ದೀರಿ, ಹೆಣ್ಣುಮಗಳಿಗೆ ಅನುಕೂಲ ಆಗತ್ತೆ ಅಂತ ಐದು ಸಾವಿರ ಬಿಡ್ತೀನಿ. ನಾಳೆ ಸಾಯಂಕಾಲದೊಳಗೆ ವ್ಯವಹಾರ ಆಗ್ಬೇಕು. ಆಗ್ಲೇ ಬೇರೊಬ್ಬರು ಕೇಳಿದಾರೆ'

ಅಯ್ನೋರ ಖಡಾಖಂಡಿತ ಮಾತನ್ನು ಒಪ್ಪದೆ ನಿರ್ವಾಹವಿರಲಿಲ್ಲ. ಕೃಷ್ಣಪ್ಪ ಈ ವಿಷಯವನ್ನು ಸಾವಿತ್ರಿಗೆ ತಿಳಿಸಲಿಲ್ಲ. ಸಾಲದ ಖಾತೆಯಲ್ಲಿ 50 ಸಾವಿರ ರೂಪಾಯಿ ಉಳಿದುಕೊಂಡಿತ್ತು. ಅದನ್ನು ಬಿಡುಗಡೆ ಮಾಡಬಹುದು. ಅಷ್ಟೇ ಸಾಕಾಗುವುದಿಲ್ಲ. ಇನ್ನೂ ಐದು ಸಾವಿರ ಬೇಕು. ಅದನ್ನು ಹೊಂದಿಸಲು ಸಾವಿತ್ರಿಗೆ ಸಾಧ್ಯವೇ? ಖಾನಾವಳಿಯ ಯಜಮಾನರಿಂದ ಪಡೆದ ಸಾಲ ಆಕೆ ತೀರಿಸಿದಂತಿಲ್ಲ. ನಾಳೆ ಸಂಜೆಯೊಳಗೆ ತಿಳಿಸದಿದ್ದರೆ ಹಸು ಮಾರಾಟವಾಗಿ ಬಿಡುತ್ತದೆ. ಆರೋಗ್ಯವಾಗಿರುವ, ಹೆಣ್ಣು ಕರುವಿರುವ ಎಚ್ ಎಫ್ ಹಸು. ಇಂತದ್ದು ಸಿಗುವುದು ಕಷ್ಟ. ಸಿಕ್ಕರೂ ಹೆಚ್ಚು ರೇಟು ಕೊಡಬೇಕಾಗುತ್ತದೆ. ಕೃಷ್ಣಪ್ಪ ಯೋಚನೆಯಲ್ಲಿದ್ದರು. ಬೆಳಿಗ್ಗಿನ ಹೊತ್ತಿಗೆ ತೀರ್ಮಾನಕ್ಕೆ ಬಂದರು. ಬ್ಯಾಂಕಿಗೆ ಹೋಗುವ ಮೊದಲೇ ಸಾವಿತ್ರಿಯ ಮನೆಗೆ ಹೋದರು. ಮಗಳು ಶಾಲೆಗೆ ಹೊರಡುವುದರಲ್ಲಿದ್ದಳು. ಸಾವಿತ್ರಿಯನ್ನು ಕರೆದು ದನದ ಶೆಡ್‌ಗೆ ಹೋದರು. ಶೆಡ್ಡನ್ನು ಸಾವಿತ್ರಿ ಸ್ವಚ್ಛವಾಗಿಟ್ಟಿದ್ದಳು. ಹಸುವಿಗೆಂದು ತಂದಿಟ್ಟಿದ್ದ ಮೇವು ಒಣಗಿತ್ತು, ಹಿಂಡಿ ಉಳಿದಿತ್ತು. ಹಸು ಕಟ್ಟಲು ಉಪಯೋಗಿಸುತ್ತಿದ್ದ ಹಗ್ಗ ಅನಾಥವಾಗಿ ಬಿದ್ದಿತ್ತು.

ಕೃಷ್ಣಪ್ಪ ಡಾಕ್ಟರ್ ಜೊತೆಯಲ್ಲಿ ಅಯ್ನೋರ ಮನೆಗೆ ಹೋಗಿದ್ದನ್ನು ಕೇಳಿ ಸಾವಿತ್ರಿಯ ಮುಖ ಪ್ರಫುಲ್ಲವಾಯಿತು. ಅಯ್ನೋರು ಹಸು ಮಾರಲು ತಯಾರಿದ್ದಾರೆ, ಆದರೆ ರೇಟು ಜಾಸ್ತಿ ಎಂದಾಗ ಮುಖ ಬಾಡಿತು. ಐದು ಸಾವಿರ ತುಂಬಲು ಸಾಧ್ಯವೇ ಎಂದು ಕೇಳಿದಾಗ ಇಲ್ಲ, ಆಗಲ್ಲ ಎಂದಳು. ಇದನ್ನು ನಿರೀಕ್ಷಿಸಿದ್ದ ಕೃಷ್ಣಪ್ಪ ತಾವು ತಂದಿದ್ದ ಹಣ ಕೊಡ ಹೋದರು. ಆಕೆ ಬೇಡ ಎಂದು ಬಿಟ್ಟಳು. ಕೃಷ್ಣಪ್ಪ, 'ನಾನು ಫ್ರೀಯಾಗಿ ಕೊಡುತ್ತಿಲ್ಲ. ಇದೂ ಸಾಲವೇ. ಬ್ಯಾಂಕಿನ ಸಾಲಕ್ಕೆ ಬಡ್ಡಿ ಕೊಡಬೇಕು. ಇದಕ್ಕೆ ಇಲ್ಲ ಅಷ್ಟೇ' ಎಂದರು. 'ನಿಮಗೆ ಸಾಧ್ಯವಾದಾಗ ವಾಪಾಸು ಮಾಡಿ' ಎಂದು ಧೈರ್ಯ ತುಂಬಿದರು. ಸಾವಿತ್ರಿಯ ಕಣ್ಣಲ್ಲಿ ನೀರು ಜಿನುಗಿತು. ಅಲ್ಲಿಯವರೆಗೆ ಅವಳಿಗೆ ಯಾರೂ ಪ್ರೀತಿ ತೋರಿರಲಿಲ್ಲ, ದೇಹವನ್ನಷ್ಟೇ ಬಯಸಿದ್ದರು. ಆಕೆಗೆ ಏನು ಹೇಳಬೇಕೆಂದೇ ತೋಚಲಿಲ್ಲ. ಹಣವನ್ನು ಸಾವಿತ್ರಿಯ ಕೈಗಿಡುತ್ತಾ, 'ನಾನು ಹಣ ಕೊಟ್ಟಿದ್ದು ಯಾರಿಗೂ ತಿಳಿಯಬಾರದು' ಎಂದು ಎಚ್ಚರಿಕೆ ಕೊಟ್ಟರು.

ಸಾವಿತ್ರಿ ಮಗಳನ್ನು ಕರೆದುಕೊಂಡು ಬ್ಯಾಂಕಿಗೆ ಬಂದು ಐದು ಸಾವಿರ ಕಟ್ಟಿದಳು. ಮಗಳು ಚಲನ್